# ನಾಮ ಜಪ



ಭಗವಂತನ ನಾಮಜಪ ಸರ್ವದಾ ಮಾಡುತ್ತಿರಬೇಕು. ಕಲಿಯುಗದಲ್ಲಿ ನಾಮ ಮಾಹಾತ್ಮ್ಯ. ಈ ಯುಗದಲ್ಲಿ ಅನ್ನಗತ ಪ್ರಾಣವಾದ್ದರಿಂದ ಯೋಗಾಭ್ಯಾಸ ಸಾಧ್ಯವಿಲ್ಲ. ಆತನ ನಾಮದಲ್ಲಿ ಅಭಿರುಚಿಯನ್ನು ಬೆಳೆಸಿಕೊಳ್ಳಬೇಕು. ವಿಷಮಶೀತಜ್ವರದ ರೋಗಿಗೆ ಆಹಾರದಲ್ಲಿ ರುಚಿಯೇ ಇಲ್ಲದೆ ಹೋಯಿತು ಎಂದರೆ ಆತ ಬದುಕುವಂತೆಯೇ ಇಲ್ಲ; ಆದರೆ ಲೇಶಮಾತ್ರವಾದರೂ ರುಚಿ ಇದ್ದದ್ದೇ ಆದರೆ ಅವನ ಸಂಬಂಧವಾಗಿ ಆಸೆಯನ್ನು ಬಿಟ್ಟುಬಿಡಬೇಕಾಗಿಲ್ಲ. ಆದ್ದರಿಂದ ಆತನ ನಾಮದಲ್ಲಿ ರುಚಿಯನ್ನು ಬೆಳೆಸಿಕೊಳ್ಳಬೇಕು. ಭಗವನ್ನಾಮವನ್ನು ಜಪಿಸಬೇಕು— ದುರ್ಗಾನಾಮವೊ, ಕೃಷ್ಣನಾಮವೊ, ಶಿವನಾಮವೊ ಯಾವುದಾದರೂ ಸರಿಯೆ. ನಾಮಜಪ ಮಾಡುತ್ತ ಮಾಡುತ್ತ ದಿನದಿನಕ್ಕೂ ಅನುರಾಗ ವೃದ್ಧಿಯಾಗುತ್ತಾ ಬರುತ್ತಿದ್ದರೆ, ಆನಂದ ದೊರಕುತ್ತಿದ್ದರೆ, ಇನ್ನು ಹೆದರಿಕೊಳ್ಳಬೇಕಾದ್ದೇನಿಲ್ಲ. ವಿಷಮಶೀತಜ್ವರ ಗುಣವಾಗಿಯೇ ಆಗುತ್ತದೆ; ಭಗವಂತನ ಕೃಪೆ ದೊರೆತೇ ದೊರೆಯುತ್ತದೆ.

ಭಗವನ್ನಾಮದಲ್ಲಿ ದೃಢ ವಿಶ್ವಾಸ ಬೇಕು. ಕೃಷ್ಣಕಿಶೋರನದು ಎಂಥ ವಿಶ್ವಾಸ! ಹೇಳುತ್ತಿದ್ದ: "ನಾನು ಭಗವಂತನ ಹೆಸರನ್ನು ಒಮ್ಮೆ ಪಠಿಸಿದ್ದೇನೆ. ನನ್ನಲ್ಲಿ ಇನ್ನು ಪಾಪ ಅಂದರೇನು? ನಾನು ಶುದ್ಧ ನಿರ್ಮಲ ವ್ಯಕ್ತಿಯಾಗಿಬಿಟ್ಟಿದ್ದೇನೆ." ಒಂದು ದಿನ ಹಲಧಾರಿ ಹೇಳಿದ: "ಅಜಾಮಿಳನೂ ಭಗವಂತನನ್ನು ತುಷ್ಟಿಗೊಳಿಸಲು ತಪಸ್ಸು ಮಾಡಬೇಕಾಯಿತು. ತಪಸ್ಸು ಮಾಡದೆ ಭಗವಂತನ ಕೃಪೆಯನ್ನು ಪಡೆಯಲು ಸಾಧ್ಯವೇ? ಕೇವಲ ಒಮ್ಮೆ 'ನಾರಾಯಣ' ಅಂತ ಹೇಳಿಬಿಟ್ಟಾಕ್ಷಣವೇ ಏನು ದೊರೆತುಬಿಟ್ಟೀತು?" ಇದನ್ನು ಕೇಳಿ ಕೃಷ್ಣಕಿಶೋರನ ಕೋಪಕ್ಕೆ ಮಿತಿಯೇ ಇಲ್ಲದೆಹೋಯಿತು. ಮತ್ತೆ ಆತ ಹೂವು ಕೊಯ್ಯಲು ಈ ತೋಟಕ್ಕೆ ಬಂದಾಗ, ಹಲಧಾರಿಯ ಕಡೆ ತಿರುಗಿಯೂ ನೋಡಲಿಲ್ಲ.

ಒಂದು ದಿನ ಗಂಗೆಯ ಏಡೇದೇರ್ ಘಟ್ಟಕ್ಕೆ ಒಬ್ಬ ಸಾಧು ಬಂದಿದ್ದ. ಆತನನ್ನು ನೋಡಿಬರಬೇಕೆಂದು ನಾವು ಮಾತುಕತೆಯಾಡಿಕೊಂಡೆವು. ಹಲಧಾರಿ ಹೇಳಿದ : "ಆ ಪಂಚಭೂತಗಳ ಚೀಲವನ್ನು ನೋಡಿಕೊಂಡು ಬರುವುದರಿಂದ ದೊರೆಯುವ ಲಾಭವೇನು?" ಅನಂತರ ಈ ಮಾತನ್ನು ಕೃಷ್ಣಕಿಶೋರ ಕೇಳಿ ಹೇಳಿದ: "ಏನು? ಸಾಧುವನ್ನು ದರ್ಶನ ಮಾಡುವುದರಿಂದ ಏನು ದೊರೆಯುತ್ತದೆ ಅಂತ ಹಲಧಾರಿ ಹೇಳಿದನೆ? ಯಾರು ರಾಮನಾಮ ಮತ್ತು ಕೃಷ್ಣನಾಮ ಜಪಿಸುತ್ತಾನೊ, ಆತನ ಭೌತದೇಹ ಚಿನ್ಮಯದೇಹ ಆಗಿಬಿಡುತ್ತದೆ. ಎಲ್ಲವೂ ಆತನ ಕಣ್ಣಿಗೆ ಚಿನ್ಮಯವಾಗಿ ಕಂಡುಬರುತ್ತದೆ—'ಚಿನ್ಮಯ ಶ್ಯಾಮ, ಚಿನ್ಮಯ ಧಾಮ.'"

ಮತ್ತೂ ಹೇಳಿದ : " ರಾಮ ನಾಮವನ್ನೇ ಆಗಲಿ, ಕೃಷ್ಣನಾಮವನ್ನೇ ಆಗಲಿ, ಒಮ್ಮೆ ಜಪಿಸಿದರೂ ನೂರು ಸಂಧ್ಯಾವಂದನೆಗಳ ಫಲ ದೊರೆತುಬಿಡುತ್ತದೆ." ಆತನ (ಕೃಷ್ಣಕಿಶೋರನ) ಒಬ್ಬ ಮಗ ಸಾಯುವಾಗ ರಾಮನಾಮ ಜಪಿಸಿ ಸತ್ತ. ಅದನ್ನು ನೋಡಿ ಕೃಷ್ಣಕಿಶೋರ ಹೇಳಿದ: "ಆತನ ಬಾಯಿಂದ ರಾಮನಾಮ ಹೊರಬಂತು; ಆತ ಇನ್ನು ಹೆದರುವುದೇನಿದೆ?" ಆದರೆ ಮಧ್ಯೆ ಮಧ್ಯೆ ಒಮ್ಮೊಮ್ಮೆ ಅಳುತ್ತಿದ್ದ. ಎಷ್ಟೇ ಆಗಲಿ, ಪುತ್ರಶೋಕವಲ್ಲವೇ?

ತುಳಸೀದಾಸ ಇನ್ನೊಂದು ವಿಷಯ ಹೇಳಿದ್ದಾನೆ: "ಅಷ್ಟ ಧಾತುಗಳು ಸ್ಪರ್ಶಮಣಿಯನ್ನು ಮುಟ್ಟಿದ್ದೇ ಆದರೆ, ಅವು ಚಿನ್ನವಾಗಿಬಿಡುತ್ತವೆ. ಅದೇ ರೀತಿಯಾಗಿ ಎಲ್ಲಾ ಜಾತಿಯ ಜನರೂ— ಚಮ್ಮಾರ, ಚಂಡಾಲ ಕೂಡ—ಭಗವನ್ನಾಮೋಚ್ಚಾರಣೆ ಮಾಡಿದರೆ ಶುದ್ಧರಾಗಿಬಿಡುತ್ತಾರೆ. ಭಗವನ್ನಾಮೋಚ್ಚಾರಣೆ ಮಾಡದೆ ಇದ್ದರೆ, ನಾಲ್ಕುವರ್ಣದವರೂ ಚಮ್ಮಾರರೇ."

ಯಾವ ಚರ್ಮವನ್ನು ಮುಟ್ಟಲೇಕೂಡದೋ ಅದನ್ನು ಹದ ಮಾಡಿಬಿಟ್ಟದ್ದೇ ಆದರೆ ಅದನ್ನು ದೇವಾಲಯಕ್ಕೆ ಕೂಡ ತೆಗೆದುಕೊಂಡು ಹೋಗಿಬಿಡಬಹುದು.

ನಾಮಜಪದಿಂದ ಮನುಷ್ಯ ಪವಿತ್ರನಾಗಿಬಿಡುತ್ತಾನೆ. ಆದ್ದರಿಂದ ನಾಮಕೀರ್ತನೆಯ ಅಭ್ಯಾಸವನ್ನಿಟ್ಟುಕೊಂಡಿರಬೇಕು. ನಾನು ಯದು ಮಲ್ಲಿಕನ ತಾಯಿಗೆ ಹೇಳಿದೆ: "ಪ್ರಾಪಂಚಿಕನಿಗೆ ಸಾಯುವ ಸಮಯದಲ್ಲಿ ಸಂಸಾರದ—ಎಂದರೆ ಹೆಂಡತಿ ಮಕ್ಕಳು ಮರಿಗಳು ಉಯಿಲು ಬರೆದಿಡುವುದು ಇವೇ ಮೊದಲಾದುವುಗಳ ಯೋಚನೆಗಳೇ ಬರುತ್ತವೆ. ಭಗವದ್ಭಾವನೆ ಮನಸ್ಸಿನಲ್ಲಿ ಏಳದು. ಇದಕ್ಕೆ ಮಾರ್ಗ ಬದುಕಿರುವಾಗ ನಾಮ ಜಪ ಕೀರ್ತನೆಯ ಅಭ್ಯಾಸವನ್ನಿಟ್ಟುಕೊಂಡಿರುವುದೇ. ಈ ಅಭ್ಯಾಸವನ್ನು ಇಟ್ಟುಕೊಂಡಿದ್ದೇ ಆದರೆ ಸಾಯುವ ಸಮಯದಲ್ಲಿ, ಭಗವನ್ನಾಮ ಬಾಯಿಂದ ಹೊರಡುತ್ತದೆ. ಗಿಳಿಯನ್ನು ಬೆಕ್ಕು ಹಿಡಿಯಿತು ಎಂದರೆ ಆಗ ಅದು 'ಕ್ಯಾ, ಕ್ಯಾ' ಅಂತ ಕೂಗಿಕೊಳ್ಳುತ್ತದೆಯೇ ವಿನಾ, 'ರಾಮ, ರಾಮ, ಹರೇಕೃಷ್ಣ!' ಅಂತ ಹೇಳುವುದಿಲ್ಲ. ಸಾವಿಗಾಗಿ ಸಿದ್ಧರಾಗಿರುವುದು ಮೇಲು. ಮುಪ್ಪಿನಲ್ಲಿ ನಿರ್ಜನ ಪ್ರದೇಶದಲ್ಲಿದ್ದು ಕೇವಲ ನಾಮಗುಣಕೀರ್ತನೆ ಮಾಡುತ್ತಿರಬೇಕು."

ಸಂಧ್ಯಾವಂದನಾದಿ ಕರ್ಮಗಳನ್ನು ಎಲ್ಲಿಯವರೆಗೆ ಮಾಡಬೇಕು ಗೊತ್ತೆ? ಎಲ್ಲಿಯವರೆಗೆ ನಾಮಜಪಮಾಡಿದ ಮಾತ್ರದಿಂದಲೆ ಮೈಯಲ್ಲಿ ರೋಮಾಂಚನವಾಗದೊ, ಕಣ್ಣುಗಳಲ್ಲಿ ಪ್ರೇಮಾಶ್ರು ಸುರಿಯದೊ ಅಲ್ಲಿಯವರೆಗೆ.

ಶ್ರೀರಾಮಕೃಷ್ಣ ವಚನವೇದ ದಿಂದ